ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

<u>ಸಿ.ಸಿ.97/2023</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾಃ ಲೋಹಿತ್ | ಪಿ.ಡಬ್ಲ್ಯೂ.4 |
| ತಂದೆಯ ಹೆಸರು | : | ಮಹೇಶ್ವರಪ್ಪ | ಸಿ.ಡಬ್ಲ್ಯೂ.6 |
| ವಯಸ್ಸು | : | 57 ವರ್ಷ | |
| ವೃತ್ತಿ | : | ವೈದ್ಯಾಧಿಕಾರಿಗಳು, ತಾಲ್ಲೂಕು ಆಸ್ಪತ್ರೆ, ಮೂಡಿಗೆರೆ | |
| ವಾಸ | : | ಚಿಕ್ಕಮಗಳೂರು | |

<u>ದಿನಾಂಕಃ 22-04-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-</u>

ನಾನು 2015 ರಿಂದ 2025 ರವರೆಗೆ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ತಜ್ಞ ವೈದ್ಯನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ29.03.2022 ರಂದು ರಾತ್ರಿಃ 09.20 ಗಂಟೆಗೆ ಸತೀಶ್ ಎಂಬುವವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ಅವರನ್ನು ಪರಿಶೀಲಿಸಿ ನೋಡಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆ.

1. ಹಣೆಯ ಎಡಭಾಗದಲ್ಲಿ ಹರಿದ ಗಾಯ 3 x 1 c.m ಇತ್ತು.

ನನ್ನ ಅಭಿಪ್ರಾಯದಲ್ಲಿ ಸದರಿ ಗಾಯವು ಸಾದಾ ಸ್ವರೂಪದ ಗಾಯ ಆಗಿರುತ್ತದೆ. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು ಸದರಿ

ಗಾಯದ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-7(ಎ) ಇರುತ್ತದೆ. ಸಾಮಾನ್ಯವಾಗಿ ಸದರಿ ಗಾಯವು ಕಲ್ಲು ಅಥವಾ ಕಬ್ಬಿಣದ ರಾಡ್ ನಿಂದ ಹೊಡೆದಾಗ ಆಗುವ ಸಾಧ್ಯತೆ ಇರುತ್ತದೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ಸದರಿ ಗಾಯಾಳುವಿನ ಗಾಯವು ನನ್ನ ಬಳಿ ಬರುವ ಒಂದು ದಿನದ ಪೂರ್ವದಲ್ಲಿ ಆಗಿರುವಂತಹ ಗಾಯ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿಯು ಕಾಲು ಜಾರಿ ಬಿದ್ದಾಗ ನಿಪಿ-7 ರಲ್ಲಿ ತೋರಿಸಿದಂತಹ ಗಾಯ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ನಿಪಿ-7 ರಲ್ಲಿ ತೋರಿಸಿದಂತಹ ಗಾಯ ಚಾಸಾ-1 ರವರು ಜಾರಿ ಬಿದ್ದಾಗ ಆಗಿದ್ದಂತಹ ಗಾಯ ಎಂದರೆ ನನಗೆ ಗೊತ್ತಿಲ್ಲ. ಕಾಲು ಜಾರಿ ಬಿದ್ದಾಗ ಕಲ್ಲು ತಾಗಿದರೆ ನಿಪಿ-7 ರಲ್ಲಿ ತೋರಿಸಿದಂತಹ ಗಾಯ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಕಬ್ಬಿಣದ ರಾಡ್ ನಿಂದ ಹೊಡೆದರೆ ನಿಪಿ-7 ರಲ್ಲಿ ತೋರಿಸಿದಂತಹ ಗಾಯ ಆಗುವ ಸಾಧ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಒತ್ತಾಯದ ಮೇರೆಗೆ ಸದರಿ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ನಾನು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

C.C.No.97/2023
PW-4 CW-6

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ